# ನೀವು ಕೇಳಿದಿರಿ?

ರಾಜೀವ್ ಎನ್. ಮಾಗಲ್, ಸಕಲೇಶಪುರ

ಉಳುವವನಿಗೇ ಭೂಮಿ ಕಾಯಿದೆಯಂತೆ ಚಾಲಕನಿಗೇ ವಾಹನ ಕಾಯಿದೆ ಜಾರಿಯಾದರೆ?



ಶೇ. 100 ಫೈನಾನ್ಸಲ್ಲಿ ವಾಹನ ಕೊಳ್ಳುವುದು ಹೆಚ್ಚುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

ವಧುಪರೀಕ್ಷೆಯಂತೆ ವರಪರೀಕ್ಷೆ ಏಕಿಲ್ಲ?

ಕನಿಷ್ಠ ಅರ್ಹತೆ ಇರುವವರನ್ನು ಮಾತ್ರ ಪರೀಕ್ಷೆಗೆ ಕೂಡಿಸುವುದು.

ಪಿ. ಶಂಕರಪ್ಪ, ಶಿವಮೊಗ್ಗ

ರಾಜ್ಯ ಬಲಾಢ್ಯವಾಗಿದ್ದರೆ ರಾಷ್ಟ್ರ ಬಲಾಢ್ಯ ಎನ್ನುವುದು ನನ್ನ ನಂಬಿಕೆ. ನೀವೇನಂತೀರಿ?

ರಾಜ್ಯದ ಧೋರಣೆ ರಾಷ್ಟ್ರದ ಏಳ್ಗೆಯತ್ತ ಇದ್ದರೆ ಮಾತ್ರ.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಕೋಳಿ ನಿದ್ದೆ ಅಂದ್ರೇನು?



ಕಣ್ಣಿಗುಂಟು, ಕಿವಿಗೆ ಇಲ್ಲ ಎಂಬ ರೀತಿಯ ಅರೆನಿದ್ರೆ.

ಬಿ. ಚಂದ್ರೇಗೌಡ, ಬೆಂಗಳೂರು

ಧಾರಾವಾಹಿಗಳಿಗೆ ಆ ಹೆಸರೇಕೆ?

ವಾರಗಟ್ಟಲೆ ಧಾರಾಕಾರವಾಗಿ ಕಣ್ಣೀರು ಹರಿಸುವುದರಿಂದ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ತಾಳಿ ಕಟ್ಟುವಾಗ ಯೋಚಿಸಬೇಕು. ಪಕ್ಷಕ್ಕೆ ಸೇರುವಾಗ?

ಸೇರಿಸಿಕೊಳ್ಳುವವರು ಸೇರುವವರ ಪೆನ್ ಡ್ರೈವ್ ಚೆಕ್ ಮಾಡಿ ಸೇರಿಸಿಕೊಳ್ಳಬೇಕು.

ಕಾವ್ಯಶ್ರೀ, ಶೋರಾಪುರ

ದಯೆಗೂ, ದಾಕ್ಷಿಣ್ಯಕ್ಕೂ ವ್ಯತ್ಯಾಸವೇನು?

ದಯೆ ಧರ್ಮದ ಮೂಲ; ದಾಕ್ಷಿಣ್ಯ ಧರ್ಮಸಂಕಟದ ಮೂಲ.

ಅಮರಯ್ಯಾ ಪತ್ರಿಮಠ, ಸುರಪುರ

ಉತ್ತಮ ಸಮಾಜಕ್ಕೆ ಒಬ್ಬ ನಾಗರಿಕನು ಕೊಡಬೇಕಾದ ಕೊಡುಗೆ ಏನು?

ತನ್ನ ಮಕ್ಕಳಿಗೆ ವಿದ್ಯೆ, ಸಂಸ್ಕಾರ ಕೊಟ್ಟರೆ ಸಾಕು.

ಅನಸೂಯಾ ಟಿ, ಕೇದಿಗೆಮನೆ

ಟೀವಿಯ 'ಬಿಗ್ ಬಾಸ್' ಮೂರ್ಖರ ಶೋನೋ ಅಥವಾ ನೋಡುವವರು ಮೂರ್ಖರೋ?

ಅದು ಕಾಲವಧೆ ಮಾಡುವವರಿಗೆಂದು ಜಾಣರು ನಡೆಸುವ ನರಪ್ರಾಣಿಗಳ ಸರ್ಕಸ್.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ರಾಮ–ರಾವಣ; ರಾಜ–ಕಾರಣ; ಮುಂದುವರಿಸಿ ರಾಮ್?

ದಶಕಂಠನಿದ್ದರೆ ರಾಮಾಯಣ; ದಶಕಂಟಕರಿದ್ದರೆ ರಾಜಕಾರಣ.

ಶಿವಣ್ಣ ಕೆ. ರಾಮಗುಂಡಿ, ಬೈಲಹೊಂಗಲ

ಸಂಬಂಧಗಳು ಗಟ್ಟಿಗೊಳ್ಳಲು ಏನು ಮಾಡಬೇಕು?

ಅಭಿಮಾನದ, ವಿಶ್ವಾಸದ ಫೆವಿಕಾಲ್ ಬಳಸಬೇಕು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಹಣಕ್ಕೂ, ಗುಣಕ್ಕೂ ಇರುವ ವ್ಯತ್ಯಾಸವೇನು?

ಹಣ ದಾಹ ಹೆಚ್ಚಿಸುತ್ತದೆ; ಗುಣ ಸ್ನೇಹ ಹೆಚ್ಚಿಸುತ್ತದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಯಾವುದೇ ಹುದ್ದೆಗೆ ಅನುಭವ ಬೇಕು. ಆದರೆ ಅನುಭವಹೀನರೂ ಸಚಿವರಾಗುವರಲ್ಲ?

ಅದಕ್ಕೆ ಧೈರ್ಯವಿದ್ದರೆ ಸಾಕು, ಅನುಭವ ಬೇಕಿಲ್ಲ.

ಆರ್. ಮಧುಸೂದನ್, ಹಾಸನ

ಗಡ್ಡ ವೈರಾಗ್ಯದ ಸಂಕೇತ. ಈಗಿನ ಹುಡುಗರು ಮದುವೆಯಲ್ಲೇ ಗಡ್ಡ ಬಿಡುವುದೇಕೆ?

ಅದೂ ವೈರಾಗ್ಯವೇ – ಕ್ಷೌರವೈರಾಗ್ಯ.

## ಬಹುಮಾನಿತ ಪ್ರಶ್ನೆ

ವಸುಧಾ, ಬೆಂಗಳೂರು

ಚಂದಿರ ಭೂಮಿಗೆ ಬೆಳಕನು ಚೆಲ್ಲಲು ಹುಣ್ಣಿಮೆ ಬರಬೇಕು. ಚುನಾವಣೆಯ ಭರವಸೆಗಳು ಈಡೇರಲು?

'ಹೇಳಿದ್ದನ್ನು ನಡೆಸಿಕೊಡು' ಎಂದು ಪಟ್ಟು ಹಿಡಿದು ಕೇಳುವ ಸಂತತಿ ಬರಬೇಕು.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ರಾಕ್ಷಸರು ಕೂಡ ದೇವರ ಸೃಷ್ಟಿ ಅಲ್ಲವೆ?

ಹೌದು. ದೇವರು ಆ್ಯಂಟಿವೈರಸ್; ರಕ್ಕಸರು ಆ್ಯಂಟಿವೈರಸ್ಸಲ್ಲೇ ಅಡಗಿರುವ ವೈರಸ್ಸುಗಳು.

ಮಲ್ಲಿಕಾರ್ಜುನ, ಸುರಧೇನುಪುರ

ಪತಿಯೇ ಪರದೈವ. ಪತ್ನಿಯೇ?

ಆ 'ಪರ'ನನ್ನು ತೆಪರನಾಗಿಸುವ ಶಕ್ತಿ.

ಕೆ.ವಿ. ಶಿವಕುಮಾರ್, ಮೈಸೂರು

ಪ್ರೀತಿಸಿದೆ ಪ್ರೇಮಿಸಿದೆ ಏತಕೊ ನಾನರಿಯೆ ಎಂದು ಹಾಡುತ್ತಿರುವಳಲ್ಲ, ಏಕೆ?



'...ಏತಕೊ ನಾ?' ಎನ್ನುವುದು ಸ್ವಗತ. 'ನರಿಯೆ' ಎನ್ನುವುದು ನಿಮ್ಮನ್ನು ಕುರಿತು!

ಎನ್.ವಿ. ಭಟ್, ಶಿವಮೊಗ್ಗ

ರಾಜಕಾರಣಿಗಳು ಎರಚುವ ಮಂಕುಬೂದಿಗೆ ಗೂಢಾರ್ಥವೇನು ರಾಮ್‌ಜೀ?

ತಾವುಗಳು 'ಅರ್ಥ'ವನ್ನು 'ಗೂಢ'ವಾಗಿ ಪಡೆಯುವುದಕ್ಕೆ ರಾಜಕಾರಣ ರಹದಾರಿ ಎಂಬುದೇ.

ಮುರಲೀಧರ ಕುಲಕರ್ಣಿ, ಬೀದರ್

'ನೀವು ಕೇಳಿದಿರಿ' ಎಂಬ ಅಂಕಣವನ್ನು 'ನಾವು ಹೇಳಿದೆವು' ಎಂದು ಬದಲಾಯಿಸಿದರೆ ಹೇಗೆ?

ಇಷ್ಟೊಂದು ಓದುಗರು ಹೇಳತೊಡಗಿದರೆ ಇದು ಅಂಕಣವಾಗದೆ ಪಾರ್ಲಿಮೆಂಟ್ ಸೆಷನ್ ಆಗುತ್ತದೆ.

■ ರಾಮ್